## ಪ್ರಸ್ತುತ ಕಾಲದಲ್ಲಿ ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವುದು ಹೇಗೆ?

ಆಧ್ಯಾತ್ಮಿಕ ಶಿಕ್ಷಣದ ಕಲ್ಪನೆಯನ್ನು ನಾವು ಪಡೆದುಕೊಂಡಿರುವುದು ವೇದಕಾಲೀನ ಋಷಿಗಳಿಂದ. ಹೀಗಾಗಿ ಅವರು ಹಾಕಿಕೊಟ್ಟ ಗುರುಕುಲ ಪದ್ಧತಿಯನ್ನೇ ನಾವು ಅನುಸರಿಸಬೇಕಾಗಿದೆ. ಏಕೆಂದರೆ ಗುರುಕುಲ ಪದ್ಧತಿಯು ಸಾವಿರಾರು ವರ್ಷಗಳು ಉಳಿದು, ಕಾಲ ಮಹಿಮೆಯ ಚಂಚಲತೆಯನ್ನು ಅಳಿದು, ತನ್ನ ಶ್ರೇಷ್ಠತೆಯನ್ನು ಮೆರೆದಿದೆ. ಈ ಪದ್ಧತಿಯ ಮೂಲ ಸಿದ್ಧಾಂತವೆಂದರೆ ನೈಜ ಶಿಕ್ಷಣದಲ್ಲಿ ಬೋಧನೆಗಿಂತ ಗ್ರಹಿಕೆಯೇ ಪ್ರಧಾನ ಎನ್ನುವುದು. ಆದ್ದರಿಂದಲೇ ಗುರುಗೃಹ ವಾಸದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿತ್ತು. ಈಗ ಶಿಕ್ಷಣವು ಪ್ರಮಾಣದಲ್ಲಿ, ಗಾತ್ರದಲ್ಲಿ, ಅತಿ ವಿಸ್ತಾರವಾಗಿ ಬೆಳೆದಿದೆ. ಇದರಿಂದ ಹಳೆಯ ಗುರುಕುಲ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಬಹು ದುಸ್ತರ. ಆದರೂ ಆಧ್ಯಾತ್ಮಿಕ ಶಿಕ್ಷಣವನ್ನು ಕೆಲವು ಆಯ್ದ ಸಂಸ್ಥೆಗಳಲ್ಲಿ ಭಾಗಶಃವಾಗಿಯಾದರೂ ಅಳವಡಿಸುವ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಮಕ್ಕಳಿಗೆ ಪ್ರಾಥಮಿಕ ಹಂತಕ್ಕೆ ಮುಂಚಿನಿಂದಲೂ, ಬಳಿಕ ಪ್ರಾಥಮಿಕ ಹಂತದಲ್ಲಿಯೂ ಹೇಳಿಕೊಡಬೇಕಾಗಿದೆ. ಆಯಾ ಮಕ್ಕಳ ಬೆಳವಣಿಗೆಯ ಹಂತವನ್ನು ಗಮನದಲ್ಲಿಟ್ಟುಕೊಂಡು, ಇದಕ್ಕೆ ಬೇಕಾದ ಸೂಕ್ತ ವಿಧಾನಗಳನ್ನು ರೂಪಿಸಬೇಕು. ಜನಜನಿತ ಗ್ರಂಥಗಳಾದ 'ಪಂಚತಂತ್ರ' ಮತ್ತು 'ಹಿತೋಪದೇಶ' ಗಳಿಂದ ಆಯ್ದ ಸಣ್ಣ, ಸರಳ ಕಥೆಗಳನ್ನು ಮಕ್ಕಳಿಗೆ ಹೇಳುವುದರಿಂದ ಹೆಚ್ಚು ಸಹಾಯವಾದೀತು. ಈ ಕಥೆಗಳನ್ನು ನಿರೂಪಿಸುವ ಚಲನಚಿತ್ರಗಳನ್ನು ವಿಶೇಷ ಆಸ್ಥೆ ವಹಿಸಿ ತಯಾರಿಸಿ ಮಕ್ಕಳಿಗೆ ತೋರಿಸುವುದು ಹೆಚ್ಚು ಫಲಕಾರಿ.

ಮುಂದಿನ ಹಂತವಾದ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ಮಟ್ಟದಲ್ಲಿ ಪ್ರಸಿದ್ಧ ಪುರುಷರ ಜೀವನಚರಿತ್ರೆಗಳನ್ನು, ಅದರಲ್ಲಿಯೂ ಸಾಧುಸಂತರ ಜೀವನಚರಿತ್ರೆಗಳನ್ನು ಪಠ್ಯ ವಿಷಯವಾಗಿ ಮಾಡುವುದು ಉತ್ತೇಜನಕಾರಿ. ಇಲ್ಲಿಯೂ ಚಲನಚಿತ್ರ ಮಾಧ್ಯಮವು ಅಮೂಲ್ಯವಾದ ಸಹಾಯವನ್ನು ಮಾಡಬಹುದು. ಓದಿ ಅರ್ಥ ಮಾಡಿಕೊಳ್ಳುವುದಕ್ಕಿಂತಲೂ, ದೃಶ್ಯಗಳನ್ನು ಕಣ್ಣಿನಿಂದ ನೋಡುವುದು ಮನಸ್ಸು, ಬುದ್ಧಿಗಳ ಮೇಲೆ ಅಗಾಧ ಪ್ರಭಾವ ಬೀರುವುದೆಂಬುದು ಅಲ್ಲಗಳೆಯಲಾಗದ ಅಂಶ. ಇದಕ್ಕೆ ರಮಾನಂದ ಸಾಗರ್ ಅವರು ತಯಾರಿಸಿದ ಪ್ರಸಿದ್ಧ 'ರಾಮಾಯಣ' ಕಿರುತೆರೆಯ ಚಲನಚಿತ್ರವೇ ಸಾಕ್ಷಿಯಾಗಿದೆ. ಈ ತರಹದ ಕಿರುತೆರೆಯ ಚಿತ್ರಗಳನ್ನು ಭಾರತದ ಹಾಗೂ ಜಗತ್ತಿನ ಪ್ರಸಿದ್ಧ ಪುರುಷರ ಜೀವನದ ಆಧಾರದ ಮೇಲೆ ತಯಾರಿಸಿ, ಹತ್ತರಿಂದ ಇಪ್ಪತ್ತು ಪ್ರಸಂಗಗಳಾಗಿ ವಿಂಗಡಿಸಿ, ವ್ಯಾಸಂಗ ವಿಷಯವನ್ನಾಗಿ ಮಾಡಿ, ವಿದ್ಯಾರ್ಥಿಗಳಿಗೆ ತೋರಿಸಿದರೆ ಗಮನಾರ್ಹ ಫಲವನ್ನು ನೀಡೀತು. ಜಗತ್ತಿನ ಸರ್ವಧರ್ಮ ಗ್ರಂಥಗಳಿಂದ ಆಯ್ದ ಭಾಗಗಳನ್ನು ಪಠ್ಯವಿಷಯವನ್ನಾಗಿ ಸೇರಿಸಬಹುದು. ಆದರೆ ಆಯ್ದ ಭಾಗಗಳು ನೇರವಾಗಿ ಇರಬೇಕು. ಹಾಗೆಯೇ ಯಾವುದೇ ರೀತಿಯಲ್ಲಿ ಮನಸ್ಸಿನ ಭಾವನೆಗಳನ್ನು ಕೆರಳಿಸದಂತೆ ಇರಬೇಕು. ಏಕಾಗ್ರತೆಗಾಗಿ ಸರಳವಾದ ಅಭ್ಯಾಸಗಳನ್ನು ಯೋಗಶಾಸ್ತ್ರದ ನೆರವಿನಿಂದ ಹೇಳಿಕೊಟ್ಟು, ಮೇಲೆ ಹೇಳಿದ ವಿಷಯಗಳಿಗೆ ಹೆಚ್ಚು ಒತ್ತನ್ನು ನೀಡಬಹುದು.

ಇನ್ನು ಕಾಲೇಜು ಮಟ್ಟದಲ್ಲಿ ಯೋಚಿಸಬಹುದಾದರೆ, ಪ್ರಮುಖವಾದ ಪೌರಸ್ತ್ಯ ಹಾಗೂ ಪಾಶ್ಚಾತ್ಯ ಧರ್ಮ ಶಾಸ್ತ್ರಗಳ ತಿರುಳನ್ನು ಬೋಧಿಸಿ, ಆಧ್ಯಾತ್ಮಿಕ ಮೌಲ್ಯಗಳನ್ನು ಅನುಷ್ಠಾನಕ್ಕೆ ತರಲು ಬೌದ್ಧಿಕ ನೆರವನ್ನು ನೀಡಬಹುದು. ಇತರ ವಿಷಯಗಳ ತಾತ್ತ್ವಿಕ ಮತ್ತು ಅನುಷ್ಠಾನಕರ ಮೂಲ ಮಾಹಿತಿಗಳನ್ನು ನೀಡಬಹುದು. ಅವು ಮುಖ್ಯವಾಗಿ ದೇವತಾರ್ಚನ ವಿಧಿ, ದಿವ್ಯನಾಮಗಳ ಜಪ, ದಿವ್ಯಮಂತ್ರಗಳ ಪಠನ, ಕೀರ್ತನೆಗಳು, ಭಕ್ತಿಪೂರ್ಣ ಸ್ತೋತ್ರಗಳ ಗಾಯನ, ತೀರ್ಥಾಟನ ಇತ್ಯಾದಿ. ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಆಯಾ ಶೈಕ್ಷಣಿಕ ವರ್ಷದಲ್ಲಿ ಒಮ್ಮೆ ೪-೫ ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಏರ್ಪಡಿಸಬಹುದು. ಇದನ್ನು ಯಾವುದಾದರೂ ಸೂಕ್ತ ಸ್ಥಳದಲ್ಲಿ ನಿವಾಸಿ ಶಿಬಿರವನ್ನಾಗಿ ಮಾಡಿದರೆ ಚೆನ್ನಾಗಿರುತ್ತದೆ. ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವ ಮುನ್ನ, ಶಿಕ್ಷಕರಿಗೆ ಮೊದಲು ತರಬೇತಿ ನೀಡಬೇಕು. ಇದನ್ನು ಎರಡು ರೀತಿಗಳಲ್ಲಿ ಮಾಡಬಹುದು: ೧. ಶಿಕ್ಷಕರಿಗೆ ತರಬೇತಿ ನೀಡಲು ವಿಶೇಷ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು ೨. ಎರಡು ವಾರಗಳ ಸಣ್ಣ ಪ್ರಮಾಣದ ತರಬೇತಿಯನ್ನು ರಜಾದಿನಗಳಲ್ಲಿ ಏರ್ಪಡಿಸುವುದು. ಕಳೆದ ೫೦ ವರ್ಷಗಳಲ್ಲಿ ತಂತ್ರಜ್ಞಾನವು ಅಗಾಧವಾಗಿ ಬೆಳೆದಿದೆ. ಶಿಕ್ಷಣಕ್ಕೆ ಬೇಕಾದ ಉಪಕರಣಗಳನ್ನು, ಶಿಕ್ಷಣೋಪಯೋಗಿ ಸಲಕರಣೆಗಳನ್ನು ತಂತ್ರಜ್ಞಾನದ ಮೂಲಕ ತಯಾರಿಸಿ ಫಲಪ್ರದವನ್ನಾಗಿ ಬಳಸಿಕೊಳ್ಳಬಹುದು. ಆದರೆ ಅದಕ್ಕೆ, ಆಧ್ಯಾತ್ಮಿಕ ಶಿಕ್ಷಣದ ಅಗತ್ಯವಿದೆ ಎಂಬ ಮನಃಪೂರ್ವಕವಾದ ಒಪ್ಪಿಗೆ ಮತ್ತು ಅದನ್ನು ಜಾರಿಗೆ ತರುವ ಹುಮ್ಮಸ್ಸು – ಎರಡೂ ಬೇಕು. ಈ ಕ್ಷೇತ್ರದಲ್ಲಿ ಅನೇಕ ಸಂಸ್ಥೆಗಳು ಅರ್ಹ ವ್ಯಕ್ತಿಗಳ ಜೊತೆಗೂಡಿ ಕೆಲಸ ಮಾಡುತ್ತಿವೆ. ಅವರ ನೆರವನ್ನು ನಾವು ಪಡೆಯಬಹುದು. ನಮ್ಮ ದೃಢನಂಬಿಕೆ ಏನೆಂದರೆ ಆ ವ್ಯಕ್ತಿಗಳು, ಸಂಸ್ಥೆಗಳು ಸಂತೋಷದಿಂದ ಮೇಲ್ಕಂಡ ಕಾರ್ಯಕ್ರಮಗಳಿಗೆ ಕೈಜೋಡಿಸಿ, ತಮ್ಮ ನೈಪುಣ್ಯವನ್ನು, ತಮ್ಮ ಜ್ಞಾನವನ್ನು ಹಂಚಿಕೊಳ್ಳುತ್ತಾರೆ ಎಂಬುದೇ ಆಗಿದೆ.

(**ಆಧಾರ:** *ಪ್ರಬುದ್ಧ ಭಾರತ, ಸೆಪ್ಟೆಂಬರ್ ೨೦೧೦*)

# ಬದುಕಿನ ಸಾಧನೆ

ಹಿಂದಿ ಮೂಲ: ರಾಮೇಶ್ವರ ಟಾಂಟಿಯಾ
ಕನ್ನಡ ಅನುವಾದ : ಶಶಿಕಲಾ ಸುಬ್ಬಣ್ಣ


ಕ್ರಿಸ್ತಪೂರ್ವ ಮೊದಲನೇ ಶತಮಾನದಲ್ಲಿ, ರೋಮ್‌ನಲ್ಲಿ ವಿಲಕ್ಷಣ ವಿಚಾರವಾದಿಯೂ ಮಹಾನ್ ವಾಗ್ಮಿಯೂ ಆದ ಸಿಸೆರೋ ಎಂಬ ಹೆಸರಿನ ವ್ಯಕ್ತಿ ಇದ್ದನು. ತನ್ನ ಸದಾಚಾರ, ಸದ್ವಿಚಾರ ಹಾಗೂ ನಿಷ್ಠಾವಂತ ಜೀವನದಿಂದ ಅವನು ಜನರ ಮನಸ್ಸಿನ ಮೇಲೆ ಸತ್ಪ್ರಭಾವ ಬೀರಿದ್ದನು.

ಆಮೋದ-ಪ್ರಮೋದ, ಭೋಗ-ವಿಲಾಸ ಮತ್ತು ಬುದ್ಧಿ-ವಿಲಾಸಗಳು ರೋಮನ್ನರ ದಿನಚರ್ಯೆಯ ಅವಿಭಾಜ್ಯ ಅಂಗಗಳಾಗಿದ್ದವು. ತರ್ಕ-ವಿತರ್ಕಗಳಲ್ಲಿ ಸ್ಪರ್ಧಿಗಳನ್ನು ಸೋಲಿಸುವುದೇ ಪ್ರತಿಷ್ಠೆಯೆಂದು ತಿಳಿಯಲಾಗುತ್ತಿತ್ತು. ಇದರಿಂದ ವಿಜಯಿಯ ನಿರ್ಣಯವಾಗದೇ ಹೋದಾಗ ಕತ್ತಿಯ ಪ್ರಯೋಗವಾಗುತ್ತಿತ್ತು. ಆ ದಿನಗಳಲ್ಲಿ ರೋಮ್‌ನ ರಸ್ತೆಗಳಲ್ಲಿ ಬಾಹುಯುದ್ಧ ಮತ್ತು ವಾಗ್ಯುದ್ಧಗಳ ದೃಶ್ಯ ಸಾಮಾನ್ಯವಾಗಿರುತ್ತಿತ್ತು. ಸಿಸೆರೋನ ವ್ಯಾಖ್ಯಾನಗಳೂ ಅಲ್ಲಿ ನಡೆಯುತ್ತಿದ್ದವು. ಶಾಸನ ನಡೆಸಲು ಜನತಂತ್ರವೇ ಶ್ರೇಷ್ಠ ವಿಧಾನ ಎನ್ನುವುದು ಅವನ ಸಿದ್ಧಾಂತವಾಗಿತ್ತು. ಜನರು ಮುಗ್ಧರಾಗಿ ಇವನ ಮಾತುಗಳನ್ನು ಕೇಳುತ್ತಿದ್ದರು.

ಆ ದಿನಗಳಲ್ಲಿ ಸಮತೆ ಮತ್ತು ಬಂಧುತ್ವವನ್ನು ಕುರಿತು ಯಾರೂ ಮಾತನಾಡುತ್ತಿರಲಿಲ್ಲ. ಗುಲಾಮಿ ಪದ್ಧತಿ ಜಾರಿಯಲ್ಲಿತ್ತು. ನಾಗರಿಕರಾದ ಗ್ರೀಕ್ ಹಾಗೂ ರೋಮನ್ನರು ಗುಲಾಮರನ್ನು ಸಂಪತ್ತೆಂದು ಪರಿಗಣಿಸುತ್ತಿದ್ದರು. ಅರಬ್ ಮತ್ತು ಆಫ್ರಿಕಾ ದೇಶಗಳಿಂದ ತಂದಿದ್ದ ನೂರಾರು ಗುಲಾಮರು ಇವರ ಸುಂದರವಾದ ಮನೆಗಳಲ್ಲಿ ಇರುತ್ತಿದ್ದರು. ಕ್ರಿಸ್ತಪೂರ್ವ ಐದನೇ ಶತಮಾನಕ್ಕೆ ಮುನ್ನ ಸೀಜರನು ತನ್ನ ಸೈನ್ಯಬಲದಿಂದ ರೋಮ್ ಸಾಮ್ರಾಜ್ಯದ ಏಕಚಕ್ರಾಧಿಪತಿಯಾದನು. ವಿರೋಧಿಸುವ ಪ್ರಯತ್ನ ಮಾಡಿದವರನ್ನು ಕ್ರೂರವಾಗಿ ಬಗ್ಗುಬಡಿದು ಕೊಲ್ಲಿಸಿದನು. 'ಸೀಜರ್! ಮಹಾನ್ ಸೀಜರ್!!' – ಜನ ಅವನ ಹೆಸರು ಕೇಳಿದರೆ ಸಾಕು, ನಡುಗುತ್ತಿದ್ದರು.

ಸಿಸೆರೋ ವ್ಯಕ್ತಿಗತವಾಗಿ ಸೀಜರನನ್ನು ವಿರೋಧಿಸಲಿಲ್ಲ. ಆದರೆ ರೋಮನ್ ರಾಜ್ಯದಲ್ಲಿ ಪ್ರಜಾಪ್ರಭುತ್ವದ ಸಿದ್ಧಾಂತಗಳನ್ನು ಬಲವಾಗಿ ಪ್ರಚಾರ ಮಾಡಿದನು. ಅವನ ಜನಪ್ರಿಯತೆಯನ್ನು ಕಂಡ ಸೀಜರನು ಅವನ ಪ್ರಾಣಹರಣ ಮಾಡದೇ ದೇಶದಿಂದ ಉಚ್ಚಾಟನೆ ಮಾಡಿಸಿದನು. ಸಿಸೆರೋ ಆಪ್ತರಾದ ತನ್ನ ಕೆಲವು ಶಿಷ್ಯರು ಮತ್ತು ಸೇವಕರೊಂದಿಗೆ ಒಂದು ಹಳ್ಳಿಯಲ್ಲಿ ಇದ್ದುಕೊಂಡು, ಪ್ರಜಾಪ್ರಭುತ್ವವನ್ನು ಕುರಿತು ಗ್ರಂಥ ಬರೆಯಲಾರಂಭಿಸಿದನು. ಮಧ್ಯೆ ಮಧ್ಯೆ ಅವನಿಗೆ ಸೀಜರನು ನಡೆಸುತ್ತಿದ್ದ ಅತ್ಯಾಚಾರ ಮತ್ತು ಅನಾಹುತಗಳ ವರದಿಗಳು ಬರುತ್ತಿದ್ದವು.

ಚಿತ್ರ: ಪ್ರಶಾಂತ ಆಚಾರ್ಯ



ಒಂದು ದಿನ ಸೀಜರನ ವಿಶ್ವಸನೀಯ ಮಿತ್ರ ಹಾಗೂ ಸೇನಾಪತಿ ಬ್ರೂಟಸ್‌ನು, ತುಂಬಿದ ಸಭೆಯಲ್ಲಿ, ಸಭಾಸದರ ಎದುರಿನಲ್ಲೇ ಅವನ ಹತ್ಯೆ ಮಾಡಿದ. ಸಾಯುವಾಗ ಸೀಜರನು ಹೇಳಿದ್ದು ಇಷ್ಟೇ, "ಬ್ರೂಟಸ್! ನೀನೂ ಸಹ.....!"